# ದಡಾರ ಮತ್ತು ರುಬೆಲ್ಲಾ

ಲಸಿಕಾ ಅಭಿಯಾನ

Ministry of Health and Family Welfare
Government of India

## ಭಾರತವನ್ನು ದಡಾರ – ರುಬೆಲ್ಲಾಮುಕ್ತ ರಾಷ್ಟ್ರವನ್ನಾಗಿ ಮಾಡುವುದು ನಿಮ್ಮ ಕೈಯಲ್ಲಿದೆ



### ಆಶಾ ಕಾರ್ಯಕರ್ತೆಯರಿಗೆ ಸಂದೇಶ

ದಡಾರ–ರುಬೆಲ್ಲಾ (MR) ಲಸಿಕೆಯು ದಡಾರ ಮತ್ತು ರುಬೆಲ್ಲಾ ಕಾಯಿಲೆಗಳಿಂದ ರಕ್ಷಣೆ ನೀಡುತ್ತದೆ. MR ಲಸಿಕೆಯನ್ನು ಒಂದು ವಿಶೇಷ ಅಭಿಯಾನದ ಮೂಲಕ ರಾಜ್ಯದ 9 ತಿಂಗಳಿಂದ 15 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ನೀಡಲಾಗುತ್ತದೆ. ಈ ಅಭಿಯಾನವು ಎಲ್ಲಾ ಶಾಲೆಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಈ ಹಿಂದೆ ಲಸಿಕೆ ಪಡೆದಿದ್ದರೂ ಸಹ ಅಭಿಯಾನದ ಸಂದರ್ಭದಲ್ಲಿ MR ಲಸಿಕೆಯನ್ನು ನೀಡಬೇಕಾಗಿರುತ್ತದೆ.

ದಡಾರ ಒಂದು ಮಾರಣಾಂತಿಕ ಕಾಯಿಲೆಯಾಗಿದ್ದು, ಕೆಮ್ಮು ಮತ್ತು ಸೀನುವುದರ ಮೂಲಕ ಇತರರಿಗೆ ಹರಡುತ್ತದೆ. ದಡಾರ ನಿಮ್ಮ ಮಗುವನ್ನು ನ್ಯುಮೋನಿಯಾ, ಅತಿಸಾರ ಬೇದಿ, ಮೆದುಳಿನ ಸೋಂಕಿನಂತಹ ಕಾಯಿಲೆಗಳಿಗೆ ತುತ್ತಾಗಿಸಬಹುದು. ತುರಿಕೆ, ವಿಪರೀತ ಜ್ವರ, ಕೆಮ್ಮು, ನೆಗಡಿ ಮತ್ತು ಕೆಂಗಣ್ಣು ದಡಾರದ ಮುಖ್ಯ ಲಕ್ಷಣಗಳು.

ರುಬೆಲ್ಲಾ ರೋಗವು ಗರ್ಭಿಣಿ ಸ್ತ್ರೀಯರಲ್ಲಿ ಕಾಣಿಸಿಕೊಂಡಾಗ ಹುಟ್ಟುವ ಮಕ್ಕಳಲ್ಲಿ ಜನ್ಮತಃ ಗ್ಲುಕೋಮಾ, ಕಣ್ಣಿನಪೊರೆ, ಕಿವುಡುತನ, ಮೆದುಳು ಜ್ವರ, ಮಾನಸಿಕ ಅಸ್ವಸ್ಥತೆ, ಬುದ್ಧಿಮಾಂದ್ಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ಈಡು ಮಾಡಬಹುದು. ರುಬೆಲ್ಲಾ ವೈರಸ್ ಗರ್ಭಪಾತಕ್ಕೂ ಸಹ ಕಾರಣವಾಗಬಹುದು.

**7 ರಿಂದ 28 ಫೆಬ್ರವರಿ 2017**
**9 ತಿಂಗಳಿಂದ 15 ವರ್ಷದ ಮಕ್ಕಳ ಅಭಿಯಾನ**

**2020ಕ್ಕೆ ದಡಾರ ನಿರ್ಮೂಲನೆ ಹಾಗೂ ರುಬೆಲ್ಲಾ ನಿಯಂತ್ರಣ ಸಾಧಿಸೋಣ**

ಬುದ್ಧಿವಂತರಾಗಿ!
ನಿಮ್ಮ ಮಗುವಿಗೆ ಸಂಪೂರ್ಣ ಲಸಿಕೆಗಳನ್ನು ಹಾಕಿಸಿ

# ದಡಾರ ಮತ್ತು ರುಬೆಲ್ಲಾ

**ಲಸಿಕಾ ಅಭಿಯಾನ**

## ಆಶಾ ಕಾರ್ಯಕರ್ತೆಯರ ಜವಾಬ್ದಾರಿಗಳು

### ದಡಾರ ರುಬೆಲ್ಲಾ ಲಸಿಕಾ ಅಭಿಯಾನದ ಸಿದ್ಧತೆ

- ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ತಾಲ್ಲೂಕು ಮಟ್ಟದ ತರಬೇತಿಯಲ್ಲಿ ಪಾಲ್ಗೊಳ್ಳುವುದು
- ಅಭಿಯಾನದ ಬಗ್ಗೆ ತಾಯಂದಿರ ಸಭೆಯಲ್ಲಿ ಪೋಷಕರಿಗೆ ಮಾಹಿತಿ ನೀಡುವುದು
- ಶಾಲೆಯಲ್ಲಿ, ಅಂಗನವಾಡಿ ಕೇಂದ್ರದಲ್ಲಿ ಇತರೆ ಸ್ಥಳದಲ್ಲಿ ಲಸಿಕಾ ಸತ್ರಕ್ಕೆ ಸರಿಯಾದ ಜಾಗ ಮತ್ತು ಸೌಲಭ್ಯಗಳನ್ನು ವ್ಯವಸ್ಥೆ ಮಾಡಿಕೊಳ್ಳುವುದು
- ಆಮಂತ್ರಣ ಪತ್ರ / ಲಸಿಕಾ ಕಾರ್ಡ್‌ಗಳನ್ನು ಎಲ್ಲಾ ಪೋಷಕರಿಗೆ ಅಭಿಯಾನಕ್ಕೆ 3–5 ದಿನ ಮುಂಚಿತವಾಗಿ ವಿತರಿಸುವುದು

### ದಡಾರ ರುಬೆಲ್ಲಾ ಲಸಿಕಾ ಅಭಿಯಾನ ಸಮಯ (ಲಸಿಕಾ ಸತ್ರ)

- ಲಸಿಕಾ ಸತ್ರ ಸಿದ್ಧತೆ ಮತ್ತು ನಿರ್ವಹಣೆಯಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಸಹಾಯ ಮಾಡುವುದು
- ಸಮುದಾಯದಲ್ಲಿನ ಪ್ರಭಾವಿ ವ್ಯಕ್ತಿಗಳಿಂದ ಲಸಿಕಾ ಸತ್ರವನ್ನು ಉದ್ಘಾಟಿಸುವುದು
- ಲಸಿಕೆ ಪಡೆದ ನಂತರ ತಾಳೆ ಶೀಟ್‌ನಲ್ಲಿ ಮತ್ತು ಮಕ್ಕಳ ಎಡ ಹೆಬ್ಬೆರಳ ಮೇಲೆ ಗುರುತು ಮಾಡುವುದು
- ಸತ್ರ ಮುಗಿದ ನಂತರ ಲಸಿಕೆ ಹಾಕಿಸಿಕೊಳ್ಳದ ಮಕ್ಕಳನ್ನು ಗುರುತಿಸಿ ಪಟ್ಟಿ ಮಾಡುವುದು
- ಸಂಭವನೀಯ ಲಸಿಕಾನಂತರ ಅಡ್ಡ ಪರಿಣಾಮಗಳ ನಿರ್ವಹಣೆಯ ಬಗ್ಗೆ ವಿಷದವಾಗಿ ತಿಳಿದುಕೊಳ್ಳಿ, ಹಾಗೂ ಅಂತಹ ಘಟನೆ ಸಂಭವಿಸಿದ್ದಲ್ಲಿ ಆರೋಗ್ಯ ಕಾರ್ಯಕರ್ತೆಗೆ ವರದಿ ಮಾಡಿ
- ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ವೇಳಾಪಟ್ಟಿಯಂತೆ ಮಗುವಿಗೆ ಮುಂದೆ ನೀಡಬೇಕಾಗುವ ಲಸಿಕೆಗಳ ಬಗ್ಗೆ ಪೋಷಕರಿಗೆ ನೆನಪಿಸಿ

NATIONAL HEALTH MISSION
राष्ट्रीय स्वास्थ्य मिशन

**7 ರಿಂದ 28 ಫೆಬ್ರವರಿ 2017**
**9 ತಿಂಗಳಿಂದ 15 ವರ್ಷದ ಮಕ್ಕಳ ಅಭಿಯಾನ**

**2020ಕ್ಕೆ ದಡಾರ ನಿರ್ಮೂಲನೆ ಹಾಗೂ ರುಬೆಲ್ಲಾ ನಿಯಂತ್ರಣ ಸಾಧಿಸೋಣ**




ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು